**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**

**ಕ್ರಿಮೀನಲ್ ಮೊಕದ್ದಮೆ ನಂ. 78/2016.**

**ಚಾಸಾ-01**

**ಪ್ರಾಸಾ- 01**

(ಸಾಕ್ಷಿಗೆ ಹಿಂದಿ ಭಾಷೆ ಮಾತ್ರ ಗೊತ್ತಿರುವುದರಿಂದ ಕನ್ನಡ ಭಾಷೆಯಲ್ಲಿ ಕೇಳುವ ಪ್ರಶ್ನೆಗಳನ್ನು ಸಾಕ್ಷಿಗೆ ಹಿಂದಿ ಭಾಷೆಗೆ ಭಾಷಾಂತರಿಸಿ ಸಾಕ್ಷಿ ಹಿಂದಿ ಭಾಷೆಯಲ್ಲಿ ಹೇಳುವ ಉತ್ತರವನ್ನು ಕನ್ನಡ ಭಾಷೆಗೆ ನಾನೇ ತರ್ಜುಮೆದಾರಳಾಗಿ ಸಾಕ್ಷಿ ವಿಚಾರಣೆಯನ್ನು ದಾಖಲಿಸಿಕೊಂಡಿರುತ್ತೇನೆ)

**ಸಾಕ್ಷಿಗೆ ದಿನಾಂಕ 19-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಅನಿತಾ ಗಂಃವಿಕ್ರಂ ಸಿಂಗ ಪರಿಹಾರ |
| ವಯಸ್ಸು | ಃ 35 ವರ್ಷ |
| ಉದ್ಯೋಗ | ಃ ಗೃಹಿಣಿ |
| ವಾಸಸ್ಥಳ | ಃ ದಾಂಡೇಲಿ |

**ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಅದು ದೂರಾಗಿದ್ದು, ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ-1** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1ಎ** ಎಂದು ಗುರುತಿಸಲಾಯಿತು.
2. ಚಾಸಾ-4 ನನ್ನ ಗಂಡ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುತ್ತದೆ.
3. ದಿಃ 08-11-2015 ರಂದು ರಾತ್ರಿ 09-45 ರ ಸಮಯದಲ್ಲಿ ನನ್ನ ಮನೆಯ ಗೇಟಿನ ಹೊರಗಡೆಗೆ ಆರೋಪಿಯು ಬಂದು, ನನ್ನ ಹೆಸರಿನಿಂದ ನನಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಬರುತ್ತಿದ್ದನು. ಆಗ ನನ್ನ ಮನೆಯಲ್ಲಿ ನನ್ನ ಜೊತೆ ನನ್ನ ಗಂಡ, ನನ್ನ ಮಕ್ಕಳು ಮತ್ತು ನನ್ನ ಅತ್ತೆ ಇದ್ದರು. ಆಗ ನಾನು ಮನೆಯಿಂದ ಹೊರಗೆ ಹೋಗಿ, ಆರೋಪಿಯನ್ನು ಏಕೆ ನನಗೆ ಬೈಯುತ್ತಿದ್ದೀಯಾ? ಎಂದು ಕೇಳಿದಾಗ, ಅವನು ನಮ್ಮ ಮನೆಯ ಗೇಟ್ ತೆಗೆದು ಒಳಗೆ ಬಂದು, ನನ್ನ ಎದೆಗೆ ಕೈ ಹಾಕಿ, ನನ್ನ ಮೈಮೇಲಿನ ಚೂಡಿದಾರ ಹರಿದನು. ಆಗ ನನ್ನ ಗಂಡನಾದ ಚಾಸಾ-4 ರವರು ಅಲ್ಲಿಗೆ ಬಂದು, ಅವರ ಮೈ ಮೇಲಿನ ಬಟ್ಟೆಗಳನ್ನು ಹಿಡಿದು, ಹರಿದು ಹಾಕಿ, ದೂಡಿದನು. ಅಷ್ಟರಲ್ಲಿ ಚಾಸಾ-5 ಮತ್ತು 6 ರವರು ಬಂದು, ಸದರಿ ಜಗಳನ್ನು ಬಿಡಿಸಿರುತ್ತಾರೆ.

4. ಅದೇ ದಿನ ಸಂಜೆ ಠಾಣೆಗೆ ತೆರಳಿ, ಆರೋಪಿಯ ವಿರುದ್ಧ ದೂರನ್ನು ನೀಡಿರುತ್ತೇನೆ. ಮರುದಿನ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 09-30 ರಿಂದ 10-00 ರವರಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಮತ್ತು ನಾನು ಘಟನಾ ಸಮಯದಲ್ಲಿ ಧರಿಸಿದ್ದ ನನ್ನ ಚೂಡಿದಾಗ ಹಾಗೂ ಚಾಸಾ-4 ರವರ ಧರಿಸಿದ್ದ ಅಂಗಿಯನ್ನು ಪೊಲೀಸರು ಜಪ್ತುಪಡಿಸಿಕೊಂಡಿರುತ್ತಾರೆ. ತದನಂತರ ನಾನು ಮತ್ತು ನನ್ನ ಗಂಡನಾದ ಚಾಸಾ-4 ರವರು ನೋವಿಗೆ ಚಿಕಿತ್ಸೆ ಪಡೆಯಲು ದಾಂಡೇಲಿ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಹಳಿಯಾಳದ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

5. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಅದು ಸ್ಥಳ ಮಹಜರಯಾಗಿದ್ದು, ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ-2** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಕಲಂ 164 ರ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-3** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಲಾಯಿತು.

6. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಮತ್ತು ಸಾಕ್ಷಿಯು ನ್ಯಾಯಾಲಯದಲ್ಲಿರುವ ಚೂಡಿದಾರ ಹಾಗೂ ಚಾಸಾ-4 ರವರು ಧರಿಸಿದ್ದ ಅಂಗಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗ **ಮು.ಮಾ-1 ಮತ್ತು 2** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ಬಿ. ಎಸ್ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು **ರೂ.300/-** ದಂಡದೊಂದಿಗೆ ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**